November 1990	1080
December 1990	1600
January 1991	1700
February 1991	1600
March 1991	1600
April 1991	1620
May 1991	1600
June 1991	1365
July 1991	2030
August 1991	1482

b) 20 Units.

c) Information regarding the number exhibited by the talkies is not available in the board. The power consumed during this period is 35,265 units.

d) Yes, a case has been registered at Bagepally police station.

e) Rs. 37,586-00.

f) 50% of the amount Rs. 18,793/- has been recovered. Appeal of the consumer is pending with Superintending Engineer (Electrical) Tumkur.

ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಇದರಲ್ಲಿರುವ ಮ್ಯಾನೇಜರ್ ಮತ್ತು ಆಕೌಂಟೆಂಟ್‌ಗಳ ಸಂಖ್ಯೆ.

3308 - ಶ್ರೀ ಪಿ.ಸಿ. ಸಿದ್ದಣ್ಣ ಗೌಡರ್ (ಕಲಘಟಗಿ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್ ನಿ, ಬೆಂಗಳೂರು ಇದರಲ್ಲಿ ಕೆಲಸ ನಿರ್ವಹಿಸುತ್ತಿರುವ ಮಾನೇಜರ್‌ಗಳು, ಅಸಿಸ್ಟೆಂಟ್ ಮ್ಯಾನೇಜರುಗಳು ಹಾಗೂ ಸೀನಿಯರ್ ಆಕೌಂಟೆಂಟ್‌ಗಳ ಸಂಖ್ಯೆ ಎಷ್ಟು? (ಶಾಖಾವಾರು ವಿವರ ನೀಡುವುದು)

ಆ) ಇದರಲ್ಲ ಪರಿಶಿಷ್ಟ ಜಾತಿ. ಪರಿಶಿಷ್ಟ ವರ್ಗ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಸೇರಿದವರ ಸಂಖ್ಯೆ ಎಷ್ಟು?

ಇ) ಮ್ಯಾನೇಜರ್ ಅಸಿಸ್ಟೆಂಟ್ ಮ್ಯಾನೇಜರ್ ಹಾಗೂ ಸೀನಿಯರ್ ಆಕೌಂಟೆಂಟ್ ಹುದ್ದೆಗಳನ್ನು ತುಂಬುವಾಗ ಮೀಸಲಾತಿ ನಿಯಮಗಳನ್ನು ಪಾಲಿಸಲಾಗಿದೆಯೇ?

ಈ) ಇಲ್ಲದಿದ್ದಲ್ಲಿ ಸರ್ಕಾರದ ಮೀಸಲಾತಿ ನಿಯಮ ಆದೇಶಗಳನ್ನು ಉಲ್ಲಂಘಿಸಿದ ಬಗ್ಗೆ ಆಡಳಿತ ಮಂಡಳಿಯ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೇ?

ಶ್ರೀ ಎಸ್. ಆರ್. ಮೋರೆ (ಸಹಕಾರ ರಾಜ್ಯ ಸಚಿವರು):

ಅ) ಮ್ಯಾನೇಜರ್ ಅಸಿಸ್ಟೆಂಟ್ ಸೀನಿಯಲ್ ಮ್ಯಾನೇಜರ್ ಆಕೌಂಟೆಂಟ್.
ಪ್ರಧಾನ ಕಛೇರಿ

ಜಯನಗರ	1(ಇನ್‌ಚಾರ್ಜ್)	-	-
ಬನಶಂಕರಿ	1	-	-

ಅ) ಇಲ್ಲ.

ಇ) ಇಲ್ಲ.

ಈ) ಪರಿಶೀಲಿಸಲಾಗುವುದು.

ರಾಜ್ಯ ಮಟ್ಟದ ಮಾರುಕಟ್ಟೆ ಸಮಿತಿಗಳ ನಿವ್ವಳ ಆದಾಯ.

3286 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ) : ಮಾನ್ಯ ಸಹಕಾರ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ರಾಜ್ಯ ಮಟ್ಟದ ಮಾರುಕಟ್ಟೆ ಸಮಿತಿಗಳ ಮಹಾಮಂಡಲದ ನಿವ್ವಳ ಆದಾಯವೆಷ್ಟು?*

ಆ) *ರಾಜ್ಯದಲ್ಲಿರುವ ಮಾರುಕಟ್ಟೆ ಸಮಿತಿಗಳ ನಿವ್ವಳ ಆದಾಯವೆಷ್ಟು?*

ಇ) *ಪ್ರತಿ ಮಾರುಕಟ್ಟೆ ಸಮಿತಿಯಲ್ಲಿ ರಾಜ್ಯ ಮಟ್ಟದ ನಿಯಂತ್ರಿತ ಮಾರುಕಟ್ಟೆ ಬ್ಯಾಂಕ್‌ನ್ನು ಸ್ಥಾಪಿಸಿರುವುದರಿಂದ ರೈತರು ಮತ್ತು ವರ್ತಕರುಗಳಿಗೆ ತಮ್ಮ ವಹಿವಾಟನ್ನು ನಡೆಸಲು ಅನುಕೂಲವಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಹಾಗಿದ್ದಲ್ಲಿ ಅಂತಹ ಬ್ಯಾಂಕನ್ನು ಸ್ಥಾಪಿಸಲಾಗುವುದೇ?*

ಶ್ರೀ ಎಸ್.ಆರ್. ಮೋರೆ (ಸಹಕಾರ ರಾಜ್ಯ ಸಚಿವರು)

ಅ) ರಾಜ್ಯ ಮಟ್ಟದಲ್ಲಿ ಮಾರುಕಟ್ಟೆ ಸಮಿತಿಗಳ ಮಹಾ ಮಂಡಳಿ ಯಾವುದು ಇಲ್ಲ. ಆದರೆ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಎಂಬ ಮಂಡಳಿ ಇದೆ ಸದರಿ ಮಂಡಳಿಗೆ 1989-90ನೇ ಸಾಲಿನಲ್ಲಿ ರಾಜ್ಯದಲ್ಲಿರುವ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಿಂದ ಬಂದಿರುವ ವಂತಿಗೆ 111.01ಲಕ್ಷ ರೂಗಳಾಗಿರುವುದು ಹಾಗೂ ಸರ್ಕಾರದಿಂದ ರೂ. 16.00 ಲಕ್ಷ ಅನುದಾನವಾಗಿ ಬಂದಿರುವುದು.

ಆ) 852.70 ಲಕ್ಷ ರೂಪಾಯಿಗಳು.

ಇ) ಹೌದು.

ಈ) ಇಂತಹ ಬ್ಯಾಂಕನ್ನು ಸ್ಥಾಪಿಸಲು ಅಜ್ಜಿಬಾಳ ಪೆಗ್ಗಡೆ ನೇತೃತ್ವದಲ್ಲಿ ನೇಮಿಸಿದ ಸಮಿತಿಯು ಶಿಫಾರಸ್ಸು ಮಾಡದೇ ಇರುವುದರಿಂದ ಈ ಪ್ರಸ್ತಾವವನ್ನು ಸರ್ಕಾರ ಕೈಬಿಟ್ಟಿದೆ.

ಗ್ರಾಮಾಂತರ ಪ್ರದೇಶತಗಳಲ್ಲಿ ವಿದ್ಯುಚ್ಚಕ್ತಿ ಮಂಡಲಿಯ ಸಾಲಾಳುಗಳು ತೃಪ್ತಿಕರವಾಗಿ ಕೆಲಸ ಮಾಡದೆ ಇರುವುದು.

3284 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಗ್ರಾಮಾಂತರ ಪ್ರದೇಶಗಳಲ್ಲಿ ಕರ್ನಾಟಕ ವಿದ್ಯುಚ್ಚಕ್ತಿ ಮಂಡಳಿಯ ಸಾಲಾಳುಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಿಲ್ಲವೆಂಬುದು ನಿಜವೆ?*

ಆ) *ಈ ದಿಸೆಯಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮವೇನು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):